Sri H. SIDDAVEERAPPA.—I want the copies of that statement to be furnished to the members so that we may know what exactly the points that have been covered and when the Budget of the Electricity Board comes they will be very useful for the members.

Papers laid on the Table

Mr. DEPUTY SPEAKER.—There is a message from the Chairman Mysore Legislative Council, which reads as follows :—

> "As required by Rule 91 of the rules of procedure and conduct of business, I pass on the Mysore Public Premises (Eviction of Unauthorised Occupants) (Amendment) Bill, 1968 for concurrence of the Legislative Assembly, as passed by the Legislative Council on 2nd April 1968."

SECRETARY.—I lay the Mysore Public Premises (Eviction of Unauthorised Occupants) (Amendment) Bill, 1968, as passed by the Legislative Council.

Mr. DEPUTY SPEAKER.—The Bill is laid on the Table of the House.

Requests for allowing discussion on the Additional Information laid on the Table of the Minister for P. W.

ಶ್ರೀ ಹೆಚ್. ಎನ್. ನಂಜೇಗೌಡ.—ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ಸ್ವಾಮಿ ನಿನ್ನೆ ಪ್ರಶ್ನೆ 635 ರ ಬಗ್ಗೆ ಇಲ್ಲಿ ಉತ್ತರ ಕೊಡುವಾಗ, ಮಂತ್ರಿಗಳು ಸರಿಯಾದ ವಿವರಗಳನ್ನು ಕೊಡಲಿಲ್ಲ. ಇದರಿಂದ ನಮಗೆ ಒಂದು ರೀತಿಯಾದ ಕಳವಳ ಮತ್ತು ಗಾಬರಿಯಾಗುತ್ತಿದೆ. ಇದರಲ್ಲಿ ಮಾನ್ಯ ನಿಜಲಿಂಗಪ್ಪನವರ ಅಳಿಯ ಹಾಗು ಮಗ ಕಂಟ್ರಾಕ್ಟ್ ಮಾಡುತ್ತ ಇದ್ದಾರೆ ಎಂದು ಕೇಳು ತ್ತೇವೆ. ಇದರ ವ್ಯವಹಾರ ನೋಡಿದರೆ ಸುಮಾರು 60-70 ಲಕ್ಷದವರೆಗೆ ಇದೆ. ಇದಕ್ಕಾಗಿ ಸಪ್ಲಿ ಮೆಂಟರಿ ಪ್ರಶ್ನೆಗಳನ್ನು ಕೇಳಿ ವಿವರಗಳನ್ನು ನಾವು ಪಡೆಯಲು ಅವಕಾಶ ಇದೆ. ಇದು ರೂಲ್ಸ್ ನಲ್ಲಿ ಕೂಡ ಇದೆ, ಎಲ್ಲ ವಿಧವಾದ ಅಡಿಷನರ್ ಇನ್‌ಫರ್‌ಮೇಷನ್‌ನನ್ನೂ ಸಭೆಯ ಮುಂದೆ ಇಡಲೇ ಬೇಕಾಗುತ್ತದೆ. ಇದರ ಬಗ್ಗೆ ತಮ್ಮ ಮೂಲಕ ನಮಗೆ ಭರವಸೆ ಬೇಕಾಗಿದೆ.

ಉಪಾಧ್ಯಕ್ಷರು.—ಇದರ ಬಗ್ಗೆ ಆಗಲೇ 15 ನಿಮಿಷಗಳು ಚರ್ಚೆಯಾಗಿದೆ. ರಿಕಾರ್ಡನ್ನು ತರಿಸಿ ನೋಡುತ್ತೇನೆ. ಹಾಗೇನಾದರೂ ಅಷ್ಯೂರೆನ್ಸ್ ಕೊಟ್ಟಿದ್ದರೆ ಆಗ ನೋಡೋಣ.

ಶ್ರೀ ಹೆಚ್. ಎನ್. ನಂಜೇಗೌಡ.—ಕೊಟ್ಟಿದ್ದರೆ ಎಂದಲ್ಲ. ಇದರಲ್ಲಿ ಯಾವ ರೀತಿಯಾಗಿ ನಾವು ಇನ್‌ಫರ್‌ಮೇಷನ್ನು ಎಲಿಸಿಟ್ ಮಾಡಬೇಕೆಂದು ಇದೆಯೋ ಅದರ ಬಗ್ಗೆ ತಕ್ಕ ಕಾರ್ಯಕ್ರಮ ವನ್ನೂ ನಾವು ತೆಗೆದುಕೊಳ್ಳಬೇಕು. ಸಭೆಯ ಮುಂದೆ ಇದನ್ನು ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕು. ಇದಕ್ಕಾಗಿ ತಾವು ಮೊದಲು ಪಿ. ಡಬ್ಲ್ಯು. ಡಿ. ಮಿನಿಸ್ಟರು ಎಲ್ಲ ವಿವರಗಳನ್ನು ಸಭೆಯ ಮುಂದೆ ಇಡಬೇಕೆಂದು ತಾವು ಆದೇಶ ಕೊಡಬೇಕು. ಇದರಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರಗಳು ಆಗಿವೆ. ಶ್ರೀ ನಿಜಲಿಂಗಪ್ಪನವರ ಅಳಿಯಂದಿರು ಹಾಗೂ ಮಕ್ಕಳು ಕಂಟ್ರಾಕ್ಟ್ ಮಾಡುವಾಗ ಸರಕಾರದ ಖಜಾನೆಯ ಹಣ ದುರುಪಯೋಗವಾಗಿದೆ ಎನ್ನುವ ವಿಚಾರ ಚರ್ಚಿಸಲು ತಾವು ಅವಕಾಶ ಕೊಟ್ಟೇ ಕೊಡಬೇಕು. ಇದೊಂದು ಭಾರಿ ಪ್ರಶ್ನೆ. ಅಧ್ಯಕ್ಷರು ಇದರ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು.—ಇದರ ಮೇಲೆ ಆಗಲೇ 15 ನಿಮಿಷಗಳ ಚರ್ಚೆಯಾಗಿದೆ.